**ದಿನಾಂಕಃ 17.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಆರ್.ಕೆ.ಎಸ್ ವಕೀಲರಿಂದಃ**

ಈ ಹಿಂದೆ ನನ್ನ ಪತ್ನಿಯ ಹೆಸರಿನಲ್ಲಿ ಮತ್ತು ಈಗ ನನ್ನ ಹೆಸರಿನಲ್ಲಿ ಇರುವ ಸರ್ವೆ ನಂ. 86/1 ರಲ್ಲಿ 1 ಎಕರೆ 12 ಗುಂಟೆ ಜಮೀನು ಇದೆ. ಸರ್ವೆ ನಂ. 87/12 ರಲ್ಲಿ 20 ಗುಂಟೆ ಇದೆ. ಸರ್ವೆ ನಂ. 87/13 ರಲ್ಲಿ 5 ಗುಂಟೆ ಇದೆ. ಸರ್ವೆ ನಂ. 86/1 ಹಾಗೂ ಸರ್ವೆ ನಂ. 87/13 ಅಕ್ಕಪಕ್ಕದಲ್ಲಿವೆ. ಸರ್ವೆ ನಂ. 86/1ಕ್ಕೂ ಕೂಡ ಆರೋಪಿತರು ಬಂದು ತೊಂದರೆ ಕೊಟ್ಟಿದ್ದಾರೆ. ನನ್ನ ದೂರಿನಲ್ಲಿ ಸರ್ವೆ ನಂ. 86/1ರ ಬಗ್ಗೆ ನಾನು ಹೇಳಿಲ್ಲ. ದಿಃ 24.08.2022ರಲ್ಲಿ ನನ್ನ ಪತ್ನಿ ಮೇಲೆ ಹೇಳಿದ ಜಮೀನುಗಳನ್ನು ಖರೀದಿಸಿದ್ದಾರೆ. ದಿಃ 21.11.2023 ರಂದು ನಾನು ಜಮೀನಿನಲ್ಲಿ ಉಳುಮೆ ಮಾಡಲು ಹೋಗಿದ್ದೆ. ಆ ದಿನಾಂಕದಂದು ಆರೋಪಿತರು ನನಗೆ ತೊಂದರೆ ಕೊಟ್ಟಿದ್ದಾರೆ ಎಂದು ನಾನು ಹೇಳುತ್ತಿದ್ದೇನೆ. ದಿಃ 24.08.2022 ರಿಂದ 21.11.2023 ರವರೆಗೆ ನಾನು ಜಮೀನನ್ನು ಉಳುಮೆ ಮಾಡಿಲ್ಲ. ಕಾರಣವೆಂದರೆ ಅಳತೆಗೆ ಹಾಕಿದ್ದೆವು. ಸಾಮಾನ್ಯವಾಗಿ ಜಮೀನನ್ನು ಖರೀದಿಸುವ ಪೂರ್ವದಲ್ಲಿಯೇ ಅಳತೆಯ ಕಾರ್ಯ ಮುಗಿಸಲಾಗುತ್ತದೆ ಎಂದರೆ ಮುಗಿಸಿದ್ದೆವು. ಅಳತೆ ಕಾರ್ಯ ಮುಗಿದ ನಂತರವೇ ಕ್ರಯಪತ್ರವನ್ನು ನೋಂದಾಯಿಸಲಾಗುತ್ತದೆ ಎಂದರೆ ಕ್ರಯ ಪತ್ರವಾಗುವಾಗ ಅಳತೆ ಕಾರ್ಯ ಮುಗಿದಿರಲಿಲ್ಲ.

ನಾನು ಹುಣಸೂರು ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ಸ್ವಾಧೀನ ಬಿಟ್ಟುಕೊಡುವಂತೆ ಕೋರಿ ಒಂದು ದಾವೆಯನ್ನು ಸಲ್ಲಿಸಿದ್ದೆ ಎಂದರೆ ಪ್ರತಿಬಂದಕಾಜ್ಞೆ ಕೋರಿ ದಾವೆ ಸಲ್ಲಿಸಿದ್ದೆ. ಸದರಿ ದಾವೆಯಲ್ಲಿ ಯಥಾ ಸ್ಥಿತಿ

ಕಾಪಾಡುವಂತೆ ನ್ಯಾಯಾಲಯ ಆದೇಶ ಮಾಡಿತ್ತು ಎಂದರೆ ಸರಿ. ನಾನು ಮೂಲ ದಾಖಲೆಗಳನ್ನು ಪರೀಶಿಲಿಸದೇ ಜಮೀನನ್ನು ಖರೀದಿಸಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದ್ದೇನೆ. ಆರೋಪಿತರಿಗೆ ಸರ್ವೆ ನಂ. 87/5 ರಲ್ಲಿ 4 ಎಕರೆ 21 ಗುಂಟೆ ಜಮೀನು ಇದೆ ಎಂದರೆ ಸರಿಯಲ್ಲ. ಈಗಿನ ಪಹಣಿಯ ಪ್ರಕಾರ 3 ಎಕರೆ 9 ಗುಂಟೆ ಇದೆ. ಆರೋಪಿತರು ತಮ್ಮ ಜಮೀನನ್ನು ನನಗೆ ಮಾರಾಟ ಮಾಡಿದ ರತ್ನಕಾಳಮ್ಮರವರ ಪೂರ್ವಜರಿಗೆ ಭೋಗ್ಯ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ಈಗ ಬೋಗ್ಯ ಪತ್ರದಂತೆ ಜಮೀನು ಕೋರಿ ನನ್ನನ್ನು ಹೊರತುಪಡಿಸಿ ಬೇರೆಯವರ ವಿರುದ್ಧ ಈಗ ದಾವೆ ಸಲ್ಲಿಸಿದ್ದಾರೆ ಎಂದರೆ ಇಲ್ಲ. ನಾನು ಜಮೀನು ಖರೀದಿಸುವ ಪೂರ್ವದಲ್ಲಿ ಯಾರು ಸ್ವಾಧೀನದಲ್ಲಿ ಇದ್ದಾರೆ ಎಂದು ಪರಿಶೀಲಿಸಿದ್ದೇನೆ. ರತ್ನಕಾಳಮ್ಮರವರೇ ಸ್ವಾಧೀನದಲ್ಲಿ ಇದ್ದಾರೆ ಎಂದು ಅವರ ಬಾಮೈದ ಚಂದ್ರಶೇಖರ್ ಹೇಳಿದ್ದಾರೆ. ನಾನು ಪ್ರತ್ಯಕ್ಷವಾಗಿ ಹೋಗಿ ಯಾರು ಸ್ವಾಧೀನದಲ್ಲಿ ಇದ್ದಾರೆ ಎಂದು ನೋಡಿಲ್ಲ ಎಂದರೆ ನೋಡಿದ್ದೇನೆ. ಅಕ್ಕ-ಪಕ್ಕದವರ ಜಮೀನನು ವಿಚಾರಿಸಿದ್ದೀರಾ ಎಂದರೆ ವಿಚಾರಿಸಿದ್ದೇನೆ. ಆರೋಪಿತರ ಜಮೀನು ನನ್ನ ಜಮೀನಿನ ಪಶ್ಚಿಮಕ್ಕೆ ಇದೆ. ನಾನು ಮೂಲ ದಾಖಲೆಗಳನ್ನು ನೋಡದೇ ಕ್ರಯ ಪತ್ರ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಕಳೆದ 30-40 ವರ್ಷಗಳಿಂದಲೂ ಆರೋಪಿತರೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಕೇಸಿಗೆ ಅನುಕೂಲವಾಗಲೀ ಎಂದು ಪೋಲಿಸರೊಂದಿಗೆ ಶಾಮಿಲಾಗಿ ಸುಳ್ಳು ದೂರನ್ನು ನೀಡಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ–2 ರಲ್ಲಿ ಬರೆದ ವಿಷಯಗಳನ್ನು ತಿಳಿದುಕೊಂಡಿದ್ದೇನೆ. ನಿಪಿ–2 ರ ಸಹಿಯನ್ನು ಠಾಣೆಯಲ್ಲಿ ಮಾಡಿದ್ದೇನೆ. ಆರೋಪಿತರಿಗೆ ಸೇರಬೇಕಾದ ಜಮೀನನನ್ನು ನಾನು ಮೋಸದಿಂದ ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.